## ಇಷ್ಟು ನೆನಪಿರಲಿ

- ವಿಚ್ಛೇದನ ಅನಿವಾರ್ಯವಾದಾಗ ಇಬ್ಬರೂ ತಮ್ಮ ನ್ಯಾಯವಾದಿಗಳೊಂದಿಗೆ ಕೂತು ಮಾತನಾಡಿ, ಈ ರೀತಿಯಲ್ಲಿ ವಿಚ್ಛೇದನದ ಕರಾರುಗಳನ್ನು ಪರಸ್ಪರರು ಒಪ್ಪಿ ನಿರ್ಧರಿಸಬಹುದು.
- ಜೀವನಾಂಶ ಎಂದರೆ, ಹೆಂಡತಿಗೆ ಜೀವನ ನಡೆಸಲು ತನ್ನದೇ ಆದ ಗಳಿಕೆ ಇಲ್ಲದೇ ಹೋದಾಗ, ಗಂಡನಾದವನು (ವಿಚ್ಛೇದನದ ನಂತರವೂ) ಕೊಡಬೇಕಾದ ಹಣ. 'ಜೀವನಾಂಶ ಎಂದರೆ ಗಂಡನಾದವನ ಆಸ್ತಿಯಲ್ಲಿ, ಗಳಿಕೆಯಲ್ಲಿ ಅರ್ಧ ಪಾಲು ಅಲ್ಲ. ನಮ್ಮ ಕಾನೂನಿನಲ್ಲಿ ಅರ್ಧ ಪಾಲಿನ ಹಕ್ಕು ಹೆಂಡತಿಯಾದವಳಿಗೆ ಇಲ್ಲ. ತಮ್ಮದೇ ಸ್ವಂತ ಗಳಿಕೆಯಿರುವ ಮಹಿಳೆಯರು ಜೀವನಾಂಶವನ್ನು ಕೇಳುವಂತಿಲ್ಲ. ಎಷ್ಟೋ ಇಂತಹ ಮಹಿಳೆಯರು ಜೀವನಾಂಶವನ್ನು ಕೇಳುವುದೂ ಇಲ್ಲ. ಗಮನಿಸಿ, ಮಹಿಳೆಯರ ಆಸ್ತಿ ಹಕ್ಕು ಬೇರೆಯೇ ವಿಷಯ.
- ಹೆಂಡತಿಯಾಗಿದ್ದವಳಿಗೆ ಸ್ವಂತ ಗಳಿಕೆ ಇಲ್ಲವಾದರೆ, ತನ್ನ ಕೈಲಾದಮಟ್ಟಿಗೆ ಗಂಡನಾಗಿದ್ದವನೇ ಮುಂದೆ ಬಂದು, ಇಂತಿಷ್ಟು ಕೊಡುತ್ತೇನೆ ಎಂದು ಹೇಳುವುದು. ಅಂತಹ ಪರಿಸ್ಥಿತಿಯಲ್ಲಿ ಹೆಂಡತಿಯಾಗಿದ್ದವಳೂ, ಆತನ ಗಳಿಕೆ, ಉಳಿದ ಜವಾಬ್ದಾರಿಗಳು ಎಷ್ಟಿದೆ ಎನ್ನುವುದರ ಆಧಾರದ ಮೇಲೆ, ನ್ಯಾಯಸಮ್ಮತವಾದ ಮೊತ್ತವನ್ನು ಜೀವನಾಂಶವಾಗಿ ಕೇಳುವುದು.
- ಮಕ್ಕಳ ವಿಷಯ ಬಂದಾಗ, ಎಲ್ಲಾ ನಿರ್ಧಾರಗಳನ್ನೂ ಮಕ್ಕಳ ಹಿತವನ್ನಷ್ಟೇ ಗಮನದಲ್ಲಿಟ್ಟುಕೊಂಡು ಮಾಡುವುದು. ಇಲ್ಲಿ ಪೋಷಕರ ಹಕ್ಕಿನ ದೃಷ್ಟಿಯಿಂದ ಯಾವುದನ್ನೂ ಕಾಣದೆ, ಮಕ್ಕಳ ಹಕ್ಕು, ಒಳಿತನ್ನಷ್ಟೇ ಬಯಸಿ ಮುಂದುವರೆಯುವುದು.
- ಮಕ್ಕಳು ಚಿಕ್ಕವರಾಗಿದ್ದರೆ, ಹೆಚ್ಚಾಗಿ ತಾಯಿಯೊಂದಿಗೆ ಇರಲು ಬಯಸುತ್ತಾರೆ. ಆಗ ತಂದೆಯಾದವನು ವಾರಕ್ಕೆ, ಎರಡು ವಾರಕ್ಕೆ ಅಥವಾ ತಿಂಗಳಿಗೊಮ್ಮೆ ಬಂದು ಮಕ್ಕಳೊಂದಿಗೆ ಸ್ವಲ್ಪ ಸಮಯ ಕಳೆಯುವಂತೆಯೋ, ಒಂದೆರಡು ದಿನ ಕಳೆಯುವಂತೆಯೋ ವ್ಯವಸ್ಥೆ ಮಾಡಿಕೊಳ್ಳುವುದು. ಈ ವಿಷಯದಲ್ಲಿ ಸಂಬಂಧಪಟ್ಟ ಇಬ್ಬರೂ ಸಭ್ಯವಾಗಿ ನಡೆದುಕೊಳ್ಳಬೇಕು. ಬೇಕಾದಲ್ಲಿ ಆಪ್ತಸಮಾಲೋಚಕರ ಸಹಾಯವನ್ನೂ ಪಡೆದುಕೊಳ್ಳಬೇಕು.
- ತಂದೆಯಾದವನೋ ತಾಯಿಯಾದವಳೋ ಮಗುವಿಗೆ ದೈಹಿಕ, ಮಾನಸಿಕ ಹಿಂಸೆ ನೀಡುತ್ತಿದ್ದರೆ, ಮಗುವನ್ನು ನೋಡಿಕೊಳ್ಳದೇ ನಿರ್ಲಕ್ಷ್ಯ ಮಾಡುತ್ತಿದ್ದರೆ, ಆಗ ಮಾತ್ರ ಮಗುವನ್ನು ಜೊತೆಗೆ ಕರೆದುಕೊಂಡು ಹೋಗಬಾರದೆಂಬ ತಾಕೀತು ಮಾಡಬಹುದು. ಮಗುವಿನ ಶಿಕ್ಷಣ, ಜೀವನಾಂಶದ ಪ್ರಮುಖ ಜವಾಬ್ದಾರಿಯನ್ನು ತಂದೆಯಾದವನು ತೆಗೆದುಕೊಳ್ಳಬೇಕಾಗುತ್ತದೆ.



ಅಥವಾ ಹೆಂಡತಿಯನ್ನು ಬಿಟ್ಟವರನ್ನು, ವಿಚ್ಛೇದನ ಕೇಳುವವರನ್ನು, ನೈತಿಕ ಭ್ರಷ್ಟರೆಂಬಂತೆ ನಾವು ಕಾಣುತ್ತೇವೆ. ಇದು 'ಮದುವೆ'ಗೆ ನಾವು ಆರೋಪಿಸಿರುವ ಅತಿಯಾದ ಮೌಲ್ಯ. ಹಲವಾರು ವಿಚ್ಛೇದನಗಳಲ್ಲಿ ಕಾಣುವ ಕಲಹಗಳು, ಸುಮಾರು ವರ್ಷಗಳ ಕೋರ್ಟ್ ದಾವೆಗಳಿಗೆ, ಇದೂ ಒಂದು ಕಾರಣ. ಏಕೆಂದರೆ, ವಿಚ್ಛೇದನ ಪಡೆಯಬಯಸುವವರು, ತಮ್ಮ ಅಹವಾಲನ್ನು ಸಮರ್ಥಿಸುವುದಕ್ಕೋಸ್ಕರ, ಗಂಡನಾಗಿದ್ದವನು / ಹೆಂಡತಿಯಾಗಿದ್ದವಳು ಎಷ್ಟು ಕ್ರೂರಿ ಎಂದೋ, ನಾಲಾಯಕ್ಕು ಎಂದೋ, ಇರುವುದನ್ನು ಮೂರುಪಟ್ಟು ಮಾಡಿ, ಇಲ್ಲದಿರುವುದನ್ನೂ ಆರೋಪಿಸಿ, ಪರಸ್ಪರರನ್ನು ಇನ್ನಷ್ಟು ಹಿಂಸಿಸಿ ಬೇರೆಯಾಗುತ್ತಾರೆ. ಅವರವರ ಲಾಯರ್‌ಗಳೂ ಅವರು ಹಾಕಬಹುದಾದ ಹಲವಾರು ದೂರು, ದಾವೆಗಳ ಬಗ್ಗೆ ತಮ್ಮ ಕಕ್ಷಿದಾರರ ಕಿವಿತುಂಬಿ, ಕುಮ್ಮಕ್ಕು ನೀಡುತ್ತಾರೆ.

ಒಳ್ಳೆಯ ಮದುವೆಯ ಸಂಬಂಧದಲ್ಲಿ ಪರಸ್ಪರ ಗೌರವ, ಪ್ರೀತಿ ಇರಬೇಕು. ಪರಸ್ಪರರು ಅರಳಿ ಬೆಳೆಯುವಂತಹ ಹೊಂದಾಣಿಕೆ ಇರಬೇಕು. ಇದು ಇಲ್ಲವಾದಲ್ಲಿ ಅಲ್ಲಿ ಒಂದು ಯಾಂತ್ರಿಕ ಸಂಬಂಧ ಇರಬಹುದಷ್ಟೇ ಹೊರತು, ಅದು ಒಳ್ಳೆಯ ಸಂಬಂಧ ಎನಿಸಿಕೊಳ್ಳುವುದಿಲ್ಲ. ಇಂತಹ ಸಂಬಂಧಗಳಿಂದಲೂ ಹೊರಬರುವ ಮಾನಸಿಕ ಸ್ವಾತಂತ್ರ್ಯ ಪ್ರತಿ ವ್ಯಕ್ತಿಗೆ ಇರಬೇಕು. ಅಲ್ಲಿ ದೈಹಿಕವಾಗಿಯೋ, ಮಾನಸಿಕವಾಗಿಯೋ ಹಿಂಸೆಯಿದ್ದರಂತೂ ಅಂತಹ ಸಂಬಂಧ ವ್ಯಕ್ತಿಗತವಾಗಿಯೂ, ಸಮಾಜಕ್ಕೂ ಕೆಟ್ಟದ್ದು ಎಂಬ ಅರಿವನ್ನು ನಾವು ನಮ್ಮಲ್ಲಿ ಬೆಳೆಸಿಕೊಳ್ಳಬೇಕಾಗಿದೆ.

### ವಿಚ್ಛೇದನದ ಕಾನೂನು

ಗಂಡನಿಂದ ಅಥವಾ ಹೆಂಡತಿಯಿಂದ ದೈಹಿಕ ಅಥವಾ ಮಾನಸಿಕ ಹಿಂಸೆಯಾಗುತ್ತಿದ್ದಲ್ಲಿ, ಇದೇ ಆಧಾರದ ಮೇಲೆ ಕೌಟುಂಬಿಕ ನ್ಯಾಯಾಲಯದಲ್ಲಿ ವಿಚ್ಛೇದನಕ್ಕಾಗಿ ದಾವೆ ಹೂಡಬಹುದು. ಮಹಿಳೆಯ ಮೇಲೆ ದೈಹಿಕ ಹಿಂಸಾಚಾರ ನಡೆಯುತ್ತಿದ್ದರೆ, ಆಕೆ 'ಐಪಿಸಿ ಸೆಕ್ಷನ್ 498ಎ' ಅಡಿಯಲ್ಲಿ ಪೊಲೀಸ್ ದೂರು ನೀಡಬಹುದು. ಕೌಟುಂಬಿಕ ದೌರ್ಜನ್ಯದಿಂದ ಮಹಿಳೆಯರನ್ನು ರಕ್ಷಿಸುವ ಕಾಯಿದೆಯಡಿಯಲ್ಲಿ (DV Act) ರಕ್ಷಣೆಯನ್ನು ಕೇಳಬಹುದು.

ಪರಸ್ಪರ ಒಪ್ಪಿಗೆಯಿಂದ ಜೊತೆಯಾಗಿ ವಿಚ್ಛೇದನ ಕೋರುತ್ತಿದ್ದಲ್ಲಿ ಯಾವ ಕಾರಣವನ್ನೂ ಹೇಳುವ, ಸಾಬೀತುಪಡಿಸುವ ಅಗತ್ಯವಿಲ್ಲ. ಒಬ್ಬರಿಗೆ ವಿಚ್ಛೇದನ ಬೇಕು ಅನಿಸಿದಾಗ, ಪರಸ್ಪರ ಮಾತನಾಡಿ, ಇನ್ನೊಬ್ಬರನ್ನು ಒಪ್ಪಿಸಿ, ಜೊತೆಯಾಗಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಬಹುದು. ಇರುವ ದಾರಿಗಳಲ್ಲಿ ಇದುವೇ ವಿಚ್ಛೇದನ ಪಡೆಯಬಹುದಾದ ಸಂಭಾವಿತ ರೀತಿ.

### ಸಭ್ಯ ರೀತಿಯ ವಿಚ್ಛೇದನ

ವಿಚ್ಛೇದನದ ಪ್ರಕರಣಗಳಲ್ಲಿ ಒಬ್ಬರ ಮೇಲೊಬ್ಬರು ಎಲ್ಲಾ ರೀತಿಯ ಆಪಾದನೆಗಳನ್ನು ಹಾಕುವುದು, ಜೀವನಾಂಶಕ್ಕಾಗಿ ನ್ಯಾಯಾಲಯಕ್ಕೆ ಅಲೆದಾಡುವುದು, ತನ್ನ ಮೇಲಾದ ಹಿಂಸೆಗೆ ಪರಿಹಾರಕ್ಕಾಗಿ ಪರದಾಡುವುದು, ಮಕ್ಕಳ ಸ್ವಾಧೀನ ಯಾರಿಗಿರಬೇಕು ಎನ್ನುವುದರ ಬಗ್ಗೆಯೂ ಕೆಟ್ಟ ಕಲಹಗಳನ್ನೇ ಮಾಡುವುದನ್ನು ಕಾಣುತ್ತೇವೆ. ಇವುಗಳಲ್ಲಿ ಎಲ್ಲವೂ ಕಾನೂನಾತ್ಮಕವಾಗಿ ಲಭ್ಯವಿರುವ ದಾರಿಗಳಾಗಿಯೇ ಕಂಡರೂ, ಇಂತಹ ಪ್ರಕರಣಗಳಲ್ಲಿ ಸಂಬಂಧಪಟ್ಟ ಆ ಇಬ್ಬರು ವ್ಯಕ್ತಿಗಳಿಗೆ, ಅವರ ಮಕ್ಕಳಿಗೆ ಇನ್ನಿಲ್ಲದ ಯಾತನೆಯಾಗಿರುತ್ತದೆ. ಅಲ್ಲದೇ ಸಮಯ, ಶಕ್ತಿ, ಹಣದ ಅನಗತ್ಯ ವ್ಯಯವೂ ಆಗಿರುತ್ತದೆ.

ಸಂಬಂಧದಲ್ಲಿ ನೆಮ್ಮದಿ ಕೆಡುತ್ತಿದೆಯೆಂಬ ಲಕ್ಷಣ ಕಂಡಾಗ, ಅದನ್ನು ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಬಹುದು. ಆಪ್ತಸಮಾಲೋಚಕರ ಸಲಹೆ, ಸಹಾಯಗಳನ್ನೂ ಪಡೆದುಕೊಳ್ಳಬಹುದು. ಇದ್ಯಾವುದೂ ಸಮಸ್ಯೆಯನ್ನು ಬಗೆಹರಿಸದಿದ್ದಾಗ ಸಂಬಂಧದಲ್ಲಿ ಮುಂದುವರೆದು ಮತ್ತಷ್ಟು ಹಿಂಸೆ, ಗೋಳನ್ನು ಅನುಭವಿಸುವುದಕ್ಕಿಂತ ಗೌರವಯುತವಾಗಿ ಬೇರೆಯಾಗಿ ಮುಂದಿನ ಜೀವನ ನಡೆಸುವುದು ಒಳ್ಳೆಯದು. ವಿಚ್ಛೇದನವಾಯಿತೆಂದರೆ, ಅಲ್ಲಿ ಯಾರೋ ಒಬ್ಬರು ಕೆಟ್ಟವರಾಗಿಯೇ ಇರಬೇಕಾಗಿಲ್ಲ. ಇಬ್ಬರು ಒಳ್ಳೆಯ ವ್ಯಕ್ತಿಗಳಿಗೂ ಒಂದು ಸಂಬಂಧದಲ್ಲಿ ಸಂತೋಷವಾಗಿ ಇರಲು ಸಾಧ್ಯವಾಗದೇ ಹೋಗಬಹುದು.

ಹೀಗೆ ಯಾರಾದರೂ ವಿಚ್ಛೇದನದ ನಿರ್ಧಾರ ಮಾಡಿದಾಗ, ಅವರ ಕುಟುಂಬದವರೂ ಇದನ್ನು ಅರ್ಥಮಾಡಿಕೊಂಡು, ಅವರ ನಿರ್ಧಾರವನ್ನು ಗೌರವಿಸಿ, ತಮ್ಮ ಕೈಲಾದ ಸಹಕಾರ ನೀಡುವ ಅಗತ್ಯವೂ ಇರುತ್ತದೆ.

ಪ್ರತಿಕ್ರಿಯಿಸಿ: feedback@sudha.co.in